**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ: 2377/2021**

| ಪಿರ್ಯಾದುದಾರರು | ವಿರುದ್ಧ | ಆರೋಪಿತರು |
|---|---|---|
| ಬನ್ನೂರು ಪೊಲೀಸ್ | | ಗಿರೀಶ ಮತ್ತು ಇತರರು |

**<u>ದೋಷಾರೋಪಣೆ</u>**

ಶ್ರೀ ಶ್ಯಾಮ್ ಪ್ರಕಾಶ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತಿ.ನರಸೀಪುರ ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿತರಾದ :

1. ಗಿರೀಶ,
   ಬಿನ್.ಶಿವನಂಜಪ್ಪ,
   ಸುಮಾರು 40 ವರ್ಷ ವಯಸ್ಸು,
2. ಸಿದ್ದಪ್ಪ,
   ಬಿನ್.ನಾಗಣ್ಣ,
   ಸುಮಾರು 45 ವರ್ಷ ವಯಸ್ಸು,
3. ಶಿವು,
   ಬಿನ್.ಬಸವರಾಜು,
   ಸುಮಾರು 40 ವರ್ಷ ವಯಸ್ಸು,

ಎಲ್ಲರ ವಾಸ ಉಕ್ಕಲಗೆರೆ ಗ್ರಾಮ,
ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

**<u>ನಿಮ್ಮಗಳ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,</u>**

ದಿನಾಂಕಃ 06.09.2021 ರಂದು ಸಂಜೆ 4.30 ಗಂಟೆ ಸಮಯದಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು, ಉಕ್ಕಲಗೆರೆ ಎಂ.ಎಲ್.ಹುಂಡಿ ರಸ್ತೆಯಲ್ಲಿರುವ ಚಾಸಾ.1 ರವರ ಬಾಬ್ತು ಜಮೀನಿನ ಮುಂಭಾಗ ರಸ್ತೆಯಲ್ಲಿ ಚಾಸಾ.1 ರವರು ಹಸುಗಳನ್ನು ಮೇಯಿಸುತ್ತಾ ನಿಂತಿದ್ದಾಗ 1 ರಿಂದ 3 ನೇ ಆರೋಪಿತರಾದ ನೀವು ಬೈಕ್ ನಲ್ಲಿ ಬಂದು ಚಾಸಾ.1 ರವನ್ನು ಉದ್ದೇಶಿಸಿ ಯಾರು ಕಬ್ಬನ್ನು ರಸ್ತೆ ಅಂಚಿನಲ್ಲಿ ಗುಡ್ಡೆ ಹಾಕಿರುವವರು ಎಂದು ಕೇಳಿದಾಗ

ಚಾಸಾ.1 ರವರು ಗೊತ್ತಿಲ್ಲ ಎಂದು ಹೇಳಿ ಹಸುಗಳನ್ನು ಹಿಡಿದುಕೊಂಡು ಹೋಗುತ್ತಿದ್ದಾಗ 1 ರಿಂದ 3 ನೇ ಆರೋಪಿತರಾದ ನೀವು ಏಕಾಏಕಿ ಚಾಸಾ.1 ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ ಅಕ್ರಮ ತಡೆಯನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಬೋಳಿಮಗನೆ ಕಬ್ಬು ಯಾರದ್ದು ಎಂದು ಗೊತ್ತಿಲ್ವಾ ನಿನಿಗೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಎಳೆದಾಡಿ ಅವರ ಎಡಕೈಯನ್ನು ನುಲಿದು ಕೈಗಳಿಂದ ತೋಳಿಗೆ ಬಲವಾಗಿ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರ ಎಡಕುಂಡಿಯ, ಎಡಮಂಡಿಯ, ಎಡತೊಡೆಯ ಮೇಲೆ ತುಳಿದು ತೀವ್ರ ಸ್ವರೂಪದ ನೋವುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.325 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 1 ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಈ ದಿವಸ ಬಚಾವಾದೆ ಮಗನೆ ನಿನ್ನನ್ನು ಸಾಯಿಸದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿಃ 24.07.2024.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ: 2377/2021**

| | | |
|---|---|---|
| 1 ನೇ ಆರೋಪಿಯ ಹೆಸರು | ಃ | ಗಿರೀಶ, |
| ಪ್ರಾಯ | ಃ | 40 ವರ್ಷ |
| ತಂದೆ | ಃ | ಶಿವನಂಜಪ್ಪ, |
| ವಾಸ | ಃ | ಉಕ್ಕಲಗೆರೆ ಗ್ರಾಮ,<br>ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆ:-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆ:-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 24.07.2024

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ: 2377/2021**

| | | |
|---|---|---|
| 2 ನೇ ಆರೋಪಿಯ ಹೆಸರು | ಃ | ಸಿದ್ದಪ್ಪ, |
| ಪ್ರಾಯ | ಃ | 45 ವರ್ಷ |
| ತಂದೆ/ಗಂಡ | ಃ | ನಾಗಣ್ಣ, |
| ವಾಸ | ಃ | ಉಕ್ಕಲಗೆರೆ ಗ್ರಾಮ,<br>ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆ:-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆ:-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 24.07.2024

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆಃ 2377/2021**

| | | |
|---|---|---|
| 3 ನೇ ಆರೋಪಿಯ ಹೆಸರು | ಃ | ಶಿವು |
| ಪ್ರಾಯ | ಃ | 40 ವರ್ಷ |
| ತಂದೆ | ಃ | ಬಸವರಾಜು, |
| ವಾಸ | ಃ | ಉಕ್ಕಲಗೆರೆ ಗ್ರಾವು,<br>ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆಃ-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 24.07.2024

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ**